ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೈನ್‌ಮನ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲದ ಬಗ್ಗೆ

೬೯೫. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೈನ್‌ಮನ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

(ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ಸಾಮಾನ್ಯವಾಗಿ ವಿದ್ಯುಚ್ಛಕ್ತಿ ಮಂಡಳಿಯ ಲೈನ್‌ಮನ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಸರಿಯಾಗಿ ಕೆಲಸ ಮಾಡದಿರುವ ಕೆಲವು ಪ್ರಕರಣಗಳು ಮಂಡಳಿಯ ಗಮನಕ್ಕೆ ಬಂದಿವೆ.

ಆ) ಲೈನ್‌ಮನ್‌ಗಳ ಕೆಲಸದ ಬಗ್ಗೆ ದೂರು ಬಂದಕೂಡಲೆ ಮಂಡಳಿ ವಿಚಾರಣೆ ನಡೆಸಿ ಅವರಿಗೆ ಎಚ್ಚರಿಕೆ ನೀಡಲಾಗುತ್ತದೆ ಹಾಗೂ ಅವರ ಕೆಲಸದಲ್ಲಿ ಸುಧಾರಣೆ ಕಂಡುಬರದೇ ಪುನಃ ದೂರುಗಳು ಬಂದಲ್ಲಿ ಅವರ ಮೇಲೆ ಶಿಸ್ತಿನ ಕ್ರಮ ಗಳಾದ ವಾರ್ಷಿಕ ಹೆಚ್ಚಳ (ಇನ್‌ಕ್ರಿಮೆಂಟ್) ತಡೆ ಹಿಡಿಯುವುದು, ಆ ಸ್ಥಳದಿಂದ ಬೇರೆ ಕಡೆಗೆ ವರ್ಗಾವಣೆ ಮಾಡುವುದನ್ನು ಮಂಡಳಿ ಕೈಗೊಳ್ಳುತ್ತದೆ.

ಶ್ರೀ ಐ. ಬಿ. ಶಂಕರ್.— ಮಾನ್ಯ ಅಧ್ಯಕ್ಷರೇ, "ಆ" ಪ್ರಶ್ನೆಗೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಲೈನ್‌ಮನ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ, ಇದು ತದ್ವಿರುದ್ಧವಾಗಿದೆ ಬಹುತೇಕ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಕೆಲವು ಜನ ಮಾತ್ರ ಸರಿಯಾಗಿ ಕೆಲಸ ಮಾಡುತಿದ್ದಾರೆ. ಇದು ನನ್ನ ವಾದ ಹಾಗೂ ಇದನ್ನು ನಾನು ಅನುಭವಿಸುತ್ತಿರುತ್ತೇನೆ.ಇ ರುವ ಶಾಸಕರಲ್ಲಿ ಯಾರನ್ನಾದರೂ ಕೇಳಿ, ಅವರೆಲ್ಲರೂ ಇದೇ ಉತ್ತರ ಕೊಡುತ್ತಾರೆ ಎಂದುಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಲೈನ್‌ಮನ್‌ಗಳ ಬಗ್ಗೆ ದೂರುಗಳು ಬಂದ ಕೂಡಲೇ ಮಂಡಲಿಯವರು ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ ರೈತರು ಅವರ ಮೇಲೆ ಮಂಡಳಿಗೆ ದೂರು ಕೊಡಬೇಕೋ ಅಥವಾ ಎಂಜಿನಿಯರ್‌ರವರಿಗೆ ದೂರು ಕೊಡಬೇಕೋ ಗೊತ್ತಾಗುತ್ತಿಲ್ಲ. ಮಂಡಳಿಗೆ ದೂರು ಕೊಡುವುದಕ್ಕೆ ಎಲ್ಲಾ ರೈತರಿಗೂ ಸಾಧ್ಯವಾಗುವುದಿಲ್ಲ. ಒಂದು ಮಾತನ್ನು ನೇರವಾಗಿ ತಮಗೆ ಹೇಳಬೇಕಾಗಿದೆ, ಲೈನ್‌ಮನ್‌ಗಳು ಎಲ್ಲಾ ಕಡೆ ಯೂನಿಯನ್‌ಗಳನ್ನು ಮಾಡಿಕೊಂಡು ಮಂತ್ರಿಗಳ ಕೈಗೆ, ಅಧ್ಯಕ್ಷರ ಕೈಗೆ ಅಥವಾ ಎಕ್ಸಿಕ್ಯೂಟೀವ್ ಎಂಜಿನೀಯರ್‌ರವರ ಕೈಗೆ ಸಿಗುತ್ತಿಲ್ಲ, ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

ಇನ್ನು ಪ್ರತಿಯೊಂದು ಮಂಡಲ ಪಂಚಾಯತ್‌ಗೆ ಒಂದೆರಡು ಲೈನ್‌ಮನ್‌ಗಳನ್ನು ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಮಂಡಲ್ ಪಂಚಾಯತ್ ಅಧ್ಯಕ್ಷರಿಗೆ ವಹಿಸಿದರೆ ಅವರಿಂದ ಉತ್ತಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಸಲಹೆಯನ್ನು ಕೊಟ್ಟಿದ್ದೆ. ಅದರ ಬಗ್ಗೆ ಸರಕಾರ ಏನು ಮಾಡುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀನರಸಿಂಹಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಹೆಚ್ಚು ಜನ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈಗ ಹಳ್ಳಿಯಲ್ಲಿ ಉರಿಯುತ್ತಿರತಕ್ಕಂಥ ಲೈಟುಗಳನ್ನು ನೋಡಿದರೆ ಅವರಿಗೆ ಕೆಲಸದ ಒತ್ತಡ ಸ್ವಲ್ಪ ಜಾಸ್ತಿಯಾಗಿದೆ ಎಂಬುದು ಗೊತ್ತಾಗುತ್ತದೆ. ನಾವು ಶೇಕಡಾ ನೂರರಷ್ಟು ಏಲೆ ಜ್ ಲೆಕ್ಟ್ರಿಫಿಕೇಷನ್ ಮಾಡಿದ್ದೇವೆ. ಈ ದೃಷ್ಟಿಯಿಂದ ಅವರಿಗೆ ಕೆಲಸದ ಒತ್ತಡ ಜಾಸ್ತಿಯಾಗಿದೆ. ಕೆಲವುಕಡೆ ಅವರ ಮೇಲೆ ಕಂಪ್ಲೇಂಟ್ ಬರುತ್ತದೆ. ಆ ದೂರನ್ನು ಮಂಡಲಿಗೆ ಕೊಡಬೇಕೆಂದೇನು ಇಲ್ಲ ಅವರ ಅಪಾಯಿಂಟಿಂಗ್ ಅಥಾರಿಟಿ ಎಕ್ಸಿಕ್ಯೂಟೀವ್ ಎಂಜಿನಿಯರ್ ಆಗಿರುವುದರಿಂದ ಅವರಿಗೆ ದೂರನ್ನು ಕೊಟ್ಟರೆ ಸಾಕು ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಇನ್ನು ಯೂನಿಯನ್ ವಿಷಯ ಹೇಳಿದರು. ಅವರು ಯೂನಿಯನ್ ಮಾಡಿಕೊಂಡಿರುವ ವಿಷಯ ಕೆಲಸ ಮಾಡಬಾರದೆಂದೇನೂ ಅಲ್ಲ, ದೂರು ಕೊಟ್ಟರೆ ಅಟೆಂಡ್ ಮಾಡಬಾರದೆನ್ನುವ ದೃಷ್ಟಿಯಿಂದಲೂ ಅಲ್ಲ, ಅವರ ಬೇರೆ ಬೇರೆ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಯೂನಿಯನ್ ಇರಬಹುದು. ಯೂನಿಯನ್ ಅನ್ನು ಅವರು ದೌರ್ಬಲ್ಯವೆಂದು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ಕೆಲವು ದೂರುಗಳು ಬಂದಾಗಯೂನಿಯನ್‌ನವರಿಗೆ ಹೇಳಿದಾಗ ಅವರು ಸಹ ಸರಿಮಾಡಿದ್ದಾರೆ.ನ್ಯಾಯವಾಗುವುದನ್ನು ಯಾರು ಸಹಿಸುವುದಿಲ್ಲ. ಕೆಲವು ಸಂದರ್ಭದಲ್ಲಿ ಎಲ್ಲಾ ಯೂನಿಯನ್ ಅಧ್ಯಕ್ಷರಿಗೂ ಈ ವಿಷಯವನ್ನು ತಿಳಿಸಿದ್ದೇವೆ. ಇಂತಹ ಕೆಲಸದಲ್ಲಿ ತಮ್ಮ ನೌಕರರು ತೊಡಗುವುದನ್ನು ಯೂನಿಯನ್‌ನವರು ಸಹ ಒಪ್ಪುವುದಿಲ್ಲ. ತಾವು ನಮ್ಮ ಅಚೀವ್‌ಮೆಂಟ್‌ನ್ನು ನೋಡಿದರೆ ಗೊತ್ತಾಗುತ್ತದೆ. ನಮ್ಮಲ್ಲಿ ನೂರಕ್ಕೆ ನೂರರಷ್ಟು ಅಚೀವ್‌ಮೆಂಟ್ ಮಾಡಿರುವುದರಿಂದ ನೌಕರರು ಕೆಲಸ ಸರಿಯಾಗಿ ಮಾಡುತ್ತಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಕೆಲವು ಕೊರತೆಗಳು ಇವೆ. ಮತ್ತು ಸ್ವಲ್ಪ ಮಟ್ಟಿಗೆ ಉದಾಸೀನ ವಿರಬಹುದು, ಈ ಬಗ್ಗೆ ತೀವ್ರವಾಗಿ ಗಮನ ಹರಿಸಿ ಎಂದು ನಾನು ಮೊನ್ನೆ ತಾನೆ ಎಲ್ಲಾ ಎಕ್ಸಿಕ್ಯುಟೀವ್ ಇಂಜನೀಯರ್ಸ್‌ಗೆ ತಿಳುವಳಿಕೆ ಕೊಟ್ಟಿದ್ದೇನೆ. ಸರಿಯಾಗಿ ಕೆಲಸ ಮಾಡದ ನೌಕರರ ಬಗ್ಗೆ ತೀವ್ರ ಆಸಕ್ತಿ ವಹಿಸಿ ಕ್ರಮ ತೆಗೆದುಕೊಳ್ಳಿ ಎಂದು ಹೇಳುವ ಜೊತೆಗೆ ಸರಿಯಾಗಿ ಕೆಲಸ ಮಾಡದ ನೌಕರರ ಮೇಲೆ ಸೂಕ್ತ ಕ್ರಮವನ್ನು ಸಹ ತೆಗೆದುಕೊಳ್ಳಿ ಎಂದು ಸೂಚನೆ ಕೊಟ್ಟಿದ್ದೇನೆ. ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ ಮಾತನಾಡುತ್ತಾ ಅವರಿಗೆ ಲೈನ್ ಮಂನ್‌ಗಳನ್ನು ಕೊಡಬೇಕೆನ್ನುವುದು ಸಾಧಾರಣವಾದ ಬೇಡಿಕೆ. ಈಗ ಮಂಡಲ್ ಪಂಚಾಯಿತಿಗಳ ಮೇಲೆ ಜವಾಬ್ದಾರಿ ಜಾಸ್ತಿಯಾಗಿದೆ. ಮಂತ್ರಿ ಬೇಡಿಕೆ ಜಾಸ್ತಿಯಾಗಿದೆ. ಸದಸ್ಯರಿಗೆ ದೂರುಗಳು ಕೊಡತಕ್ಕಂಥಾದ್ದು ಸಹ ಜಾಸ್ತಿಯಾಗಿದೆ. ಈ ಬಗ್ಗೆ ಸರ್ಕಾರ ಒಂದು ಪಾಲಿಸಿ ನಿರ್ಧಾರವನ್ನು ಕೇಳಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಯೋಚನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಐ.ಬಿ. ಶಂಕರ್.— ಮಾನ್ಯ ಅಧ್ಯಕ್ಷರೇ, ೧೯೭೨ನೇ ಇಸವಿಯಲ್ಲಿ ಇವರ ಇಲಾಖೆಯಲ್ಲಿ ಅಪಾಯಿಂಟ್‌ಮೆಂಟ್ ಮಾಡಿರುವುದು. ಆಗಿನ ಎಲೆಕ್ಟ್ರಿಫಿಕೇಷನ್‌ಗೂ ಈಗಿನ ಎಲೆಕ್ಟ್ರಿಫಿಕೇಷನ್‌ಗೂ ನೂರು ಪಟ್ಟು ಜಾಸ್ತಿಯಾಗಿದೆ. ಈಗಿನ ಎಲೆಕ್ಟ್ರಿಫಿಕೇಶನ್‌ಗೆ ತಕ್ಕಂತೆ ತಾವು ಹೊಸದಾಗಿ ಅಪಾಯಿಂಟ್‌ಮೆಂಟ್ಸ್ ಮಾಡುತ್ತೀರಾ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಮಾನ್ಯ ಅಧ್ಯಕ್ಷರೇ, ೧೯೭೨ನೇ ಇಸವಿಯಲ್ಲಿ ಅಪಾಯಿಂಟ್‌ಮೆಂಟ್ಸ್ ಮಾಡಿರುವುದು ಅಲ್ಲ. ೧೯೭೮ನೇ ಇಸವಿಯಿಂದೀಚೆಗೆ ತಾವು ಹೇಳಿದ ಹಾಗೆ ಎಲೆಕ್ಟ್ರಿಫಿಕೇಷನ್ ಈಗ ನೂರು ಪಟ್ಟು ಜಾಸ್ತಿಯಾಗಿದೆ ೧೦ ಲಕ್ಷದಿಂದ ಸುಮಾರು ೪ಕ್ಷ ಲಕ್ಷದವರಿಗೂ ಇನ್‌ಸ್ಪೆಲೇಶನ್ ಜಾಸ್ತಿಯಾಗಿದೆ. ಆದ್ದರಿಂದ ಸರ್ಕಾರ ಈಗ ಏನು ಮಾಡಿದೆ ಎಂದರೆ ನೀಡ್ ಬೇಸ್‌ಡ್ ಅಪಾಯಿಂಟ್‌ಮೆಂಟ್ಸ್ ಮಾಡಿಕೊಳ್ಳಬೇಕೆಂದು ನಿರ್ಧಾರ ತೆಗೆದುಕೊಂಡಿದ್ದು ಅದನ್ನು ಕಾರ್ಯಗತ ಮಾಡುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ — ಮಾನ್ಯ ಅಧ್ಯಕ್ಷರೇ ಕೆ.ಇ.ಬಿ.ಗೂ ಸರ್ಕಾರಕ್ಕೂ ಸಂಬಂಧ ಇಲ್ಲ, ಅವರಿಗೂ ನಮಗೂ ಸಂಪರ್ಕವಿಲ್ಲವೆಂದು ಆ ಜನರು ಮಾತನಾಡಿಕೊಳ್ಳುತ್ತಿರುವುದು ಒಂದು ಮಾತಿದೆ. ಇದರಿಂದ ಕೆ.ಇ.ಬಿ.ಯವರೇ ಆಗಲಿ, ಸರ್ಕಾರದವರೇ ಆಗಲಿ ನೇರವಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ ಆದ್ದರಿಂದ ಈ ಕೆ.ಇ.ಬಿ. ಸಂಸ್ಥೆಗೆ ಕೊಟ್ಟಿರುವ ಸ್ವಾಯತ್ತತೆಯನ್ನು ರದ್ದು ಮಾಡಿ ಸರ್ಕಾರವೇ ಆ ಇಲಾಖೆಯನ್ನು ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ? ಅವರಿಗೆ ಸ್ವಾಯತ್ತತೆಯನ್ನು ಕೊಟ್ಟಿರುವುದರಿಂದ ಸರ್ಕಾರದ ಮಾತು ಅವರು ಕೇಳುವುದಿಲ್ಲ. ಆದ್ದರಿಂದ ಪುನಃ ಮಾಡಿ ಅವರಿಗೆ ಕೊಟ್ಟಿರುವ ಸ್ವಾಯತ್ತತೆಯನ್ನು ರದ್ದು ಮಾಡುತ್ತೀರಾ?

ಶ್ರೀ ಲಕ್ಷ್ಮೀನರಸಿಂಹಯ್ಯ — ಮಾನ್ಯ ಅಧ್ಯಕ್ಷರೇ, ಇಡೀ ರಾಷ್ಟ್ರದಲ್ಲಿಯೇ ಈ ಒಂದು ವ್ಯವಸ್ಥೆ ಇದೆ. ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದನೆ ಮಾಡಿ ಅದನ್ನು ಬಳಕೆ ಮಾಡುವುದಕ್ಕೆ ಈ ಮಂಡಲಿಯನ್ನು ರಚನೆ ಮಾಡಿದೆ. ಈ ಬೋರ್ಡ್ ಸರ್ಕಾರದ ಅಧೀನದಲ್ಲಿದೆ. ಸರ್ಕಾರಕ್ಕೂ ನಮಗೂ ಸಂಬಂಧವಿಲ್ಲ. ಸರ್ಕಾರ ಹೇಳಿದಂತೆ ನಾವು ಕೇಳಬೇಕಾಗಿಲ್ಲವೆಂದು ಯಾರಾದರೂ ತಮಗೆ ಹೇಳಿದ್ದನ್ನೆ ಹೇಳಿ, ಸರ್ಕಾರದ ಅಧೀನದಲ್ಲಿ ಆ ಮಂಡಲಿ ಇದೆ. ಸರ್ಕಾರ ಹೇಳಿದ ಕೆಲಸವನ್ನು ಮಂಡಲಿ ಮಾಡಬೇಬೇಕಾಗುತ್ತದೆ.

ಶ್ರೀ ಆರ್. ವೆಂಕಟರಾವಮಯ್ಯ.— ಕೆ.ಇ.ಬಿ.ಯಲ್ಲಿ ಹಂಗಾವಿಯಾಗಿ ಕೆಲಸ ಮಾಡುತ್ತಿರುವಂಥ ನೌಕರರನ್ನು ಖಾಯಂ ಪಿತಕ್ಕೆ ಮಾಡಬಾರದು?

ಶ್ರೀ ಲಕ್ಷ್ಮೀನರಸಿಂಹಯ್ಯ.— ನಮ್ಮಲ್ಲಿ ಹಂಗಾವಿ ನೌಕರರು ಯಾರೂ ಇಲ್ಲ.

ಬೇಡ್ತಿ ಮಂತ್ತು ಅಘನಾಶಿನಿ ಜಲವಿದ್ಯುತ್ ಯೋಜನೆಗಳ ಬಗ್ಗೆ.

೧೭೬೩. **ಶ್ರೀ ಆರ್.ಎನ್ ನಾಯಕ್ (ಭಟ್ಕಳ) —ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?**

ಅ) ಬೇಡ್ತಿ ಮತ್ತು ಅಘನಾಶಿನಿ ಜಲವಿದ್ಯುತ್ ಯೋಜನೆಗಳನ್ನು ಅನುಕ್ರಮವಾಗಿ ಎಂದಿನಿಂದ ಪ್ರಾರಂಭಿಸಲಾಯಿತು ?

ಆ) ಈ ಯೋಜನೆಗಳಿಗೆ ನಿಗದಿ ಪಡಿಸಿರುವ ಅಂದಾಜು ವೆಚ್ಚವೆಷ್ಟು ?

ಇ) ಬೇಡ್ತಿ ಯೋಜನೆಯ ಅಡಿಯಲ್ಲಿ ಈಗ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು? ಮತ್ತು ಇದುವರೆಗೂ ಎಷ್ಟು ಹಣ ವಿನಿಯೋಗಿಸಲಾಗಿದೆ?

ಈ) ಆ ಯೋಜನೆಯ ಅಡಿಯಲ್ಲಿ ಮುಳುಗಡೆ ಆಗುವ ಸಾಗುವಳಿ ಭೂಮಿ ಹಾಗೂ ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು?

ಉ) ಬೇಡ್ತಿ ಯೋಜನೆಯ ಅನುಷ್ಠಾನದ ಬಗ್ಗೆ ವರದಿ ನೀಡಲು ಪರಿಶೀಲನಾ ಸಮಿತಿಯನ್ನು ಎಂದು ನಿಯೋಜಿಸಲಾಯಿತು ? ಮತ್ತು ಈ ಸಮಿತಿಯಲ್ಲಿರುವ ಸದಸ್ಯರಾರು ? ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದೆಯೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ಬೇಡ್ತಿ ಯೋಜನೆ ಕೆಲಸವನ್ನು ೧೯೭೯ರ ಆಕ್ಟೋಬರ್ ತಿಂಗಳಲ್ಲಿ ಪ್ರಾರಂಭಿಸಿ ಅದೇ ವರ್ಷದ ಡಿಸೆಂಬರ್ ತಿಂಗಳಿಂದ ಸ್ಥಗಿತಗೊಳಿಸಿದೆ.

ಅಘನಾಶಿನಿ ಯೋಜನೆಯು ಕೆಲಸ ಪ್ರಾರಂಭಿಸಿಲ್ಲ.

ಆ) ೧೯೭೯ರ ಅಂದಾಜಿನಂತೆ ಬೇಡ್ತಿ ಯೋಜನೆಯ ಅಂದಾಜು ವೆಚ್ಚ ೧೫೬.೭೯ ಕೋಟಿ ರೂ. ಗಳು ಅಘನಾಶಿನಿ ಯೋಜನೆಯು ಇನ್ನೂ ಪರಿಶೀಲನೆಯಲ್ಲಿದೆ.

ಇ) ಬೇಡ್ತಿ ಯೋಜನೆಯು ಸ್ಥಗಿತಗೊಂಡಿರುವುದರಿಂದ ಅಲ್ಲಿ ಕೆಲಸಗಾರರಿಲ್ಲ. ಕೇವಲ ಉಸ್ತುವಾರಿ ಕೆಲಸವನ್ನು ನೋಡಿಕೊಳ್ಳಲು ಕನಿಷ್ಠ ಸಿಬ್ಬಂದಿಯನ್ನು ಇಟ್ಟಿದೆ. ೩೧-೩-೮೬ರವರೆಗೆ ೯,೦೫ ಕೋಟಿ ರೂ. ವೆಚ್ಚವಾಗಿದೆ.

ಈ) ಬೇಡ್ತಿ ಯೋಜನೆಯಲ್ಲಿ ೬೨೧ ಎಕರೆ ಸಾಗುವಳಿ ಜಮೀನು ೬೮೦೦ ಎಕರೆ ಅರಣ್ಯ ಜಮೀನು ಮುಳುಗಡೆಯಾಗುತ್ತದೆ.

ಉ) ದಿನಾಂಕ ೧೩-೧೦-೧೯೮೧ರಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು, ಸಮಿತಿಯ ಸದಸ್ಯರು.

ಶ್ರೀಯುತರು

೧)	ಪೆಚ್ ವಿ. ನಾರಾಯಣರಾವ್	... ಅಧ್ಯಕ್ಷ
೨)	ಜಿ.ಆರ್. ವಾಮನ ಕುರ್ಮೆ	... ಸದಸ್ಯ
೩)	ಬಿ.ಸಿ. ಅಂಗಡಿ	... ಸದಸ್ಯ
೪)	ಎಂ ವಿ. ಪಾರ್ಥಸಾರಥಿ	... ಸದಸ್ಯ
೫)	ಕೆ.ಸಿ. ರೆಡ್ಡಿ	... ಸದಸ್ಯ
೬)	ಸಿಸಿಲ್ ಸಾಲ್ಡಾನ	... ಸದಸ್ಯ
೭)	ಎ. ಪೂ ಹನದಾಸ್ ಮೋಸಸ್	... ಸದಸ್ಯ ಕಾರ್ಯದರ್ಶಿ,

ಸಮಿತಿಯು ಸರ್ಕಾರಕ್ಕೆ ದಿನಾಂಕ ೩೦-೪-೧೯೮೨ರಂದು ವರದಿ ಸಲ್ಲಿಸಿದೆ.